# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ***
# ***ನ್ಯಾಯಾಲಯ, ಮೈಸೂರು***

**ಎಸ್‌ಸಿ. 34/2018**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಸಂತೋಷ ಕುಮಾರ್. ಜಿ. | | ***ಪ್ರಮಾಣ ಮಾಡಿಸಿದ ದಿನಾಂಕಃ*** |
| **ತಂದೆ ಹೆಸರು** | ಃ ಗಣೇಶ್. ಎಸ್. | | **07.02.2020** |
| **ವಯಸ್ಸು** | ಃ 34 ವರ್ಷ | | |
| **ವೃತ್ತಿ** | ಃ ಹೆಚ್.ಡಿ.ಎಫ್.ಸಿ. ಬ್ಯಾಂಕ್‌ನಲ್ಲಿ ಕೆಲಸ | **ಪ್ರಾ.ಸಾ. ಃ** | **12** |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ. ಃ** | **31** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2016* ರಿಂದ ಹೆಚ್.ಡಿ.ಎಫ್.ಸಿ. ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಸಾಕ್ಷಿಯು ಅಮಾನತು ಮಹಜರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರನ್ನು ನಿ.ಪಿ.*15* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*15*(ಎ) ಎಂದು ಗುರುತಿಸಲಾಯಿತು.

ದಿನಾಂಕಃ *25.04.2016* ರಂದು ಮಧ್ಯಾಹ್ನ *3.30* ರಿಂದ *4.30* ಗಂಟೆಯ ಸಮಯದಲ್ಲಿ ಉದಯಗಿರಿ ಪೊಲೀಸರು ನನ್ನನ್ನು ಕರೆಯಿಸಿ ಮೃತನ ಮೈಮೇಲೆ ಇದ್ದ ಬಟ್ಟೆಗಳನ್ನು ಪೊಲೀಸ್ ಪೇದೆ ಹಾಜರುಪಡಿಸಿದ್ದು ಅದನ್ನು ನನ್ನ ಸಮಕ್ಷಮ ಪಂಚನಾಮೆ ಮಾಡಿ ಮಹಜರ್ ಮಾಡಿ ವಶಪಡಿಸಿಕೊಂಡಿರುತ್ತಾರೆ. ಒಂದು ಶರ್ಟ, ಒಂದು ಬನಿಯನ್, ಒಂದು ಬೆಲ್ಟ, ಒಂದು ಕಪ್ಪು ಕಲರ್ ಪ್ಯಾಂಟು, ಒಂದು ರಿಸ್ಟ ಬ್ಯಾಂಡ್, ಒಂದು ಪೆನ್ನು ಅಂದರೆ ಮು.ಮಾ.*7* ರಿಂದ *13* ಮಹಜರ್ ನಲ್ಲಿ ಜಪ್ತಿ ಮಾಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ವಸ್ತುಗಳನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯು ಮು.ಮಾ, ಮೇಲೆ ಅಂಟಿಸಿರುವ ಚೀಟಿಗಳನ್ನು ನೋಡಿ ಗುರುತಿಸಿ ತನ್ನ ಸಹಿ ಇದೆ ಎಂದು ಹೇಳುತ್ತಾರೆ.

<u>**ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದಃ-**</u>

. ಮೃತ ರಾಜು ನನ್ನ ಸ್ನೇಹಿತ ಎಂದರೆ ಸರಿ ಇದೆ. ಸಿ.ಸಿ.ಬಿ. ಪೊಲೀಸರು ನಿಮ್ಮ ಗೆಳಯನಿಗೆ ಸಂಬಂಧಪಟ್ಟ ವಸ್ತುಗಳ ಒಂದು ಪಂಚನಾಮೆ ಇದೆ ಎಂದು ನನಗೆ ಕರೆದರು. ಅದಕ್ಕೆ ನಾನು ಸ್ಥಳಕ್ಕೆ ಹೋಗಿದ್ದೆ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನಾನು ಓದಿ ತಿಳಿದುಕೊಂಡಿರುತ್ತೇನೆ. ವಸ್ತುಗಳ ಮೇಲೆ ಪೆನ್ನಿನಿಂದ ಮಾರ್ಕ ಮಾಡಿರುವುದಿಲ್ಲ. ನನ್ನ ಜೊತೆ ಬಾಲರಾಜು ಮತ್ತು ಅಮೃತ ಎನ್ನುವವರು ಇದ್ದರು. ನನಗೆ ಎ.ಸಿ,ಪಿ. ಇವರ ಗೋಪಾಲ್ ಇವರ ಪರಿಚಯ ಇತ್ತು ಆದರೆ ಅವರ ಜೊತೆ ಇರುವ ಉಳಿದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಮು.ಮಾ. *7* ರಿಂದ ***13*** ವಸ್ತುಗಳನ್ನು ಹಾಜರುಪಡಿಸಿದ ಸಿ.ಸಿ.ಬಿ ಪೊಲೀಸ್ ಈತನು ಹೆಸರು ನನಗೆ ನೆನಪಿಲ್ಲಾ.

***ಮರು ವಿಚಾರಣೆಃ- ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

*ಓ ಹೇ ಕೇ ಸ ಇ ಎ ಒ.,*

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***